ಕರ್ನಾಟಕ ವಿಧಾನ ಸಭೆ

ಮಂಗಳವಾರ ೨೯ನೇ ಮಾರ್ಚ್ ೧೯೯೪

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ. ಎಸ್. ಕೌಜಲಗಿ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ತ್ರಿವರ್ಣ ಪಡಿತರ ಚೀಟಿಗಳ ಹಂಚಿಕೆ

*೫೬೬ (೭೪೮) ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ತ್ರಿವರ್ಣ ಪಡಿತರ ಚೀಟಿಗಳನ್ನು ಪಡೆಯಲು ಆದಾಯ ಮಿತಿಯನ್ನು ರೂ.೩,೫೦೦ ಗಳಿಂದ ೬,೪೦೦ ಗಳಿಗೆ ಏರಿಸಲಾಗಿದ್ದು, ಅದರ ಪ್ರಕಾರ ಸಮೀಕ್ಷೆಯಿಂದ ಎಷ್ಟು ಕುಟುಂಬಗಳು ತ್ರಿವರ್ಣ ಪಡಿತರ ಚೀಟಿಗಳನ್ನು ಪಡೆಯಲು ಅರ್ಹವಾಗಿವೆ ?

ಆ) ರಾಜ್ಯದಲ್ಲಿ ಅರ್ಹ ಕುಟುಂಬಗಳ ಪೈಕಿ ಎಷ್ಟು ಕುಟುಂಬಗಳಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ನೀಡಲಾಗಿದೆ ?

ಇ) ರಾಜ್ಯದಲ್ಲಿ ಬಾಕಿ ವಿತರಿಸಬೇಕಾದ ತ್ರಿವರ್ಣ ಪಡಿತರ ಚೀಟಿಗಳೆಷ್ಟು ?

ಈ) ರಾಜ್ಯದಲ್ಲಿ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಿರುವ ಕುಟುಂಬಗಳಿಗೆ ಕಡಿಮೆ ದರದಲ್ಲಿ ಆಹಾರ ಪದಾರ್ಥಗಳನ್ನು ವಿತರಿಸಲಾಗಿದೆಯೇ ?

ಉ) ವಿತರಿಸಿದ್ದರೆ ಎಷ್ಟು ಪ್ರಮಾಣದಲ್ಲಿ ವಿತರಿಸಲಾಗಿದೆ ಅದರ ಮೇಲೆ ನೀಡಿರುವ ಸಬ್ಸಿಡಿ (ಸಹಾಯಧನ) ಎಷ್ಟು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೫೧,೬೨ ಲಕ್ಷಗಳು.

ಆ) ೪೭.೨೧ ಲಕ್ಷ. (ಜನವರಿ ೯೪ರ ಅಂತ್ಯದವರೆಗೆ)

ಇ) ೪.೪೧ ಲಕ್ಷಗಳು.

ಈ) ಹೌದು.

ಉ) ತ್ರಿವರ್ಣ ಪಡಿತರ ಚೀಟಿದಾರರಿಗೆ ಅಕ್ಕಿಯನ್ನು ಒಂದು ಪಡಿತರ ಚೀಟಿಗೆ ೬ ರಿಂದ ೭ ಕೆ.ಜಿ. ಮತ್ತು ಗೋಧಿ ೩ರಿಂದ ೪ಕೆ.ಜಿ. ಯನ್ನು ಸಹಾಯಧನದ ಮೇರೆಗೆ ವಿತರಿಸಲಾಗಿದೆ. ಇದರ ಮೇಲೆ

ನೀಡಿರುವ ಸಹಾಯಧನ ಡಿಸೆಂಬರ್ ೧೯೩೫ರ ಅಂತ್ಯದವರೆಗೆ ರೂ. ೩೦,೯೯,೨೯,೭೯೯ ಆಗಿರುತ್ತದೆ. (ಸಾಗಾಣಿಕೆ ವೆಚ್ಚ ಸೇರಿ).

ಶ್ರೀ ಆರ್. ನಾರಾಯಣ.—ಮಾನ್ಯ ಅಧ್ಯಕ್ಷರೇ ಉತ್ತರದಲ್ಲಿ ೫೧.೬೨ ಲಕ್ಷ ಕುಟುಂಬಗಳವರು ತ್ರಿವರ್ಣ ಕಾರ್ಡ್‌ಗಳನ್ನು ಪಡೆಯಲಿಕ್ಕೆ ಅರ್ಹರಾಗಿದ್ದಾರೆ ಎಂದು ಸರ್ವೆಯಿಂದ ತಿಳಿದು ಬಂದಿದೆ ಎಂದು ಹೇಳಿದ್ದಾರೆ. ಆದರಲ್ಲಿ ೪೭.೨೧ ಲಕ್ಷ ಕುಟುಂಬಗಳಿಗೆ ಈಗಾಗಲೇ ಕಾರ್ಡ್‌ಗಳನ್ನು ಕೊಡ ಲಾಗಿದೆ ಹಾಗೂ ೪.೪೧ ಲಕ್ಷ ಬಾಕಿ ಇದೆ ಎಂದು ಹೇಳಿದ್ದಾರೆ. ಈ ತ್ರಿವರ್ಣ ಕಾರ್ಡ್ ಪಡೆದಿರ ತಕ್ಕಂಥವರಿಗೆ ತಮಗೆ ಗೊತ್ತಿರುವ ಪ್ರಕಾರ ಮುಂದಿನ ತಿಂಗಳಿನಿಂದ ಸಹಾಯಧನ ರೂಪದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುತ್ತಾ ಇದ್ದೀರಿ. ಮಾನ್ಯ ಅಧ್ಯಕ್ಷರೇ ನನ್ನ ಒಂದು ಪ್ರಶ್ನೆ ಇತ್ತೀಚೆಗೆ ಸರ್ಕಾರ ಬಜೆಟ್‌ನಲ್ಲಿ ಪ್ರಕಟಿಸಿದಂತೆ ಒಂದು ರೂಪಾಯಿ ಅಕ್ಕಿ ಮೇಲೂ, ೫೦ ಪೈಸೆ ಗೋಧಿಯ ಮೇಲೂ ತ್ರಿವರ್ಣ ಕಾರ್ಡ್ ಹೋಲ್ಡರ್ಸ್‌ಗೆ ಸಹಾಯಧನ ಕೊಟ್ಟಿರತಕ್ಕಂಥಾದ್ದು ಬಹಳ ಸಹಾಯಕವಾಗಿದೆ. ಈಗ ಏನು ಆಗಿದೆ ಅಂದರೆ ಈ ರೆಡ್ ಕಾರ್ಡ್ ಮತ್ತು ಕೇಸರಿ ಕಾರ್ಡ್ ಅಂತ ನಾವು ಏನು ಹೇಳುತ್ತೇವೆ ಅದನ್ನು ಪಡೆದಿರತಕ್ಕಂಥವರಿಗೆ ೭ ರೂಪಾಯಿ ೫ ಪೈಸೆಗೆ ಒಂದು ಕೆ.ಜಿ. ಅಕ್ಕಿಗೆ ೪–೫೫ ಪೈಸೆಗೆ ಒಂದು ಕೆ.ಜಿ. ಗೋಧಿಯನ್ನು ಕೊಡುತ್ತಿದ್ದೀರಿ. ಓಪನ್ ಮಾರ್ಕೆಟ್‌ನಲ್ಲಿ ಅಕ್ಕಿಯ ಬೆಲೆ ೬–೫೦ ಪೈಸೆ ಇದೆ. ಮತ್ತು ಗೋಧಿ ೫ ರೂಪಾಯಿಗಳಿಂದ ೭ ರೂಪಾಯಿಗಳವರೆಗೂ ಇದೆ ಎಂದು ತಿಳಿದು ಬಂದಿದೆ. ಆದ್ದರಿಂದ ಯಾರು ಕೆಂಪು ಅಥವಾ ಕೇಸರಿ ಕಾರ್ಡ್‌ಗಳನ್ನು ಪಡೆದಿದ್ದಾರೆ ಅವರಿಗೂ ಅಕ್ಕಿಗೆ ಒಂದು ರೂಪಾಯಿ ಗೋಧಿಗೆ ೫೦ ಪೈಸೆಯನ್ನು ಕಡಿಮೆ ಮಾಡಬೇಕು. ಈಗ ರಿಟೈಲ್ ಓನರ್ಸ್ ಏನು ಇದ್ದಾರೆ. ಅವರು ಯಾರು ಲಿಫ್ಟ್ ಮಾಡುತ್ತಿಲ್ಲ. ಕಾರಣ ಏನೆಂದರೆ, ಅವರು ಲಿಫ್ಟ್ ಮಾಡಿದಂತಹ ಸಗಿರು ಕಾರ್ಡ್‌ದಾರರಿಗೆ ಇತ್ತೀಚೆಗೆ ಏನೋ ಸ್ವಲ್ಪ ತೆಗೆದುಕೊಂಡು ಹೋಗತಕ್ಕಂಥ ಪರಿಪಾಠ ಆಗಿದೆ. ಕತವೆ ದುಡ್ಡು ಆದಮೇಲೆ, ಆದರೆ ಕೆಂಪು ಕಾರ್ಡ್‌ದಾರರೊಬ್ಬರೂ ತೆಗೆದುಕೊಂಡು ಹೋಗುತ್ತಿಲ್ಲ. ಆದ್ದರಿಂದ ರಿಟೈಲ್ ಲಿಫ್ಟಿಂಗ್ ಪಾಯಿಂಟ್ ಸ್ವಲ್ಪ ಇಂಪ್ರೂವ್ ಆಗುವ ದೃಷ್ಟಿಯಿಂದ ಮತ್ತು ಏನು ಸೆಂಟ್ರಲ್ ಗವರ್ನಮೆಂಟ್‌ನವರು ಸೆಂಟ್ರಲ್ ಪೂಲ್‌ನಿಂದ ಆಹಾರ ಧಾನ್ಯಗಳನ್ನು ಒದಗಿಸುತ್ತಾರೆ, ಆ ಅಕ್ಕಿ ಮತ್ತು ಗೋಧಿಯನ್ನು ಸಂಪೂರ್ಣವಾಗಿ ಬಳಕೆ ಮಾಡುವ ದೃಷ್ಟಿಯಿಂದ ಸರ್ಕಾರ ಈ ತ್ರಿವರ್ಣ ಕಾರ್ಡ್‌ದಾರರಿಗೆ ಕೊಟ್ಟಂತಹ ರಿಯಾಯ್ತಿ ದರದಲ್ಲಿ ಅಕ್ಕಿ ಮೇಲೆ ಒಂದು ರೂಪಾಯಿ ಗೋಧಿ ಮೇಲೆ ೫೦ ಪೈಸೆ ಕಡಿಮೆ ಮಾಡುವುದು ಬಹಳ ಸೂಕ್ತ ಮತ್ತು ಇತ್ತೀಚೆಗೆ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ನನಗೆ ತಿಳಿದ ಪ್ರಕಾರ ಸಕ್ಕರೆ ಪ್ರಮಾಣ ಸೆಂಟ್ರಲ್ ಕೋಟಾದಲ್ಲಿ ಇತ್ತೀಚೆಗೆ ೫ ಪರ್ಸೆಂಟ್ ಕಡಿಮೆ ಆಗುತ್ತಾ ಇದೆಯೆಂದು ವರದಿ ಬಂದಿದೆ. ಈಗ ನಾವು ಒಂದು ಕೆ.ಜಿ. ಸಕ್ಕರೆಯನ್ನು ಸಹ ಗ್ರಾಮಾಂತರ ಪ್ರದೇಶದ ಕಾರ್ಡ್‌ದಾರರಿಗೆ ಕೊಡಲು ಆಗುತ್ತಿಲ್ಲ. ಈ ದೃಷ್ಟಿಯಿಂದ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು ಮತ್ತು ಈ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸ ಬೇಕು.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ಈ ತ್ರಿವರ್ಣ ಚೀಟಿ ಪಡೆತರದಾರರಿಗೆ ಕೆ ಸುವಷ್ಟೇ ನಮ್ಮ ಕೇಸರಿ ಕಾರ್ಡ್‌ನವರಿಗೂ ದರ ಕಡಿಮೆ ಮಾಡಬೇಕು ಅಂತ ಮಾನ್ಯ ಸದಸ್ಯರ ಬೇಡಿಕೆ ಏನಿದೆ, ಈ ಬಗ್ಗೆ ಈಗಾಗಲೇ ನಮ್ಮ ರಾಜ್ಯಸರ್ಕಾರ ೩೦ ಕೋಟಿ ೯೯ ಲಕ್ಷ ೨೯ ಸಾವಿರ ೭೯೯ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದೆ. ಆರ್ಥಿಕ ಇಲಾಖೆ ಒಪ್ಪಿದರೆ ಬೇರೆಯವರಿಗೂ ಕೊಡಲು ನನ್ನದೇನೂ ಅಭ್ಯಂತರ ಇಲ್ಲ. ಆದರೆ ನಾನಾಗಿಯೇ ಆಶ್ವಾಸನೆ ಕೊಡಲಿಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಅವರು ಒಪ್ಪಿದರೆ ಇದನ್ನು ಕೊಡಲಿಕ್ಕೆ ಸಾಧ್ಯ.

ಶ್ರೀ ಆರ್. ನಾರಾಯಣ್.—ಆಗಬಹುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊಸ ಬಡಾವಣೆಗಳ ನಿರ್ಮಾಣ ಕುರಿತು

೨೫೯ (೦೦೬) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ). —ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊಸ ಬಡಾವಣೆಗಳ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆಯೇ ?

ಆ) ಬೆಂಗಳೂರು ನಗರದಲ್ಲಿ ನಿವೇಶನಗಳ ಬೇಡಿಕೆ ಎಷ್ಟಿದೆ ?

ಇ) ನಿವೇಶನಗಳಿಗಾಗಿ ಬೆಂಗಳೂರು ಪ್ರಾಧಿಕಾರಕ್ಕೆ ಎಷ್ಟು ಜನ ಅರ್ಜಿಗಳನ್ನು ಸಲ್ಲಿಸಿದ್ದಾರೆ ?